## ಮೈಸೂರು ಚೆಂದ ಎಂದ ಶಾನ್ವಿ

ಚಿತ್ರೀಕರಣದ ಸಲುವಾಗಿ ಈಚೆಗೆ ಮೈಸೂರಿಗೆ ಭೇಟಿ ನೀಡಿದ್ದ ನಟಿ ಶಾನ್ವಿ ಶ್ರೀವತ್ಸ, ಮೈಸೂರಿನ ಚೆಲುವನ್ನು ಹಾಡಿ ಹೊಗಳಿದ್ದಾರೆ. ಸೆಟಲ್ ಆಗಲು ಮೈಸೂರಿಗಿಂತ ಸುಂದರ ಸ್ಥಳ ಬೇರೆಲ್ಲಿದೆ ಎಂದು ಕೊಂಡಾಡಿದ್ದಾರೆ.

‘ಕಳೆದ ಹತ್ತು ವರ್ಷಗಳಿಂದ ಮೈಸೂರಿಗೆ ಆಗಾಗ್ಗೆ ಭೇಟಿ ನೀಡುತ್ತಲೇ ಇರುತ್ತೇನೆ. ಮೈಸೂರು ನನ್ನ ಫೇವರೆಟ್ ಸ್ಥಳ. ಈ ನಗರದಲ್ಲಿ ಒಂದು ವೈಬ್ ಇದೆ. ಮನಸ್ಸು ರಿಲ್ಯಾಕ್ಸ್ ಆಗುವಂತೆ ಮಾಡುತ್ತದೆ. ಇಲ್ಲಿ ಮನೆಗಳಿವೆ, ಆದರೆ ಅತಿ ಎತ್ತರದ ಕಟ್ಟಡಗಳಿಲ್ಲ. ಸುಂದರ ಆಕಾಶವನ್ನು ನೋಡಬಹುದು. ಕಟ್ಟಡಗಳಷ್ಟೇ ಪ್ರಕೃತಿಯ ಪಾಲೂ ಸಮವಾಗಿದೆ’ ಎಂದಿದ್ದಾರೆ.

‘ಪರಂಪರೆ ಹಾಗೂ ಸಂಸ್ಕೃತಿಗೆ ಹೆಸರಾಗಿರುವ ಮೈಸೂರಿಗೆ ಈ ಪಟ್ಟ ದಕ್ಕಿರುವುದಕ್ಕೆ ಇಲ್ಲಿನ ಜನರೇ ಕಾರಣ. ಸ್ಥಳಗಳನ್ನು ಚೆನ್ನಾಗಿ ನಿರ್ವಹಣೆ ಮಾಡಿದ್ದಾರೆ. ಅತಿ ಇದು ದೊಡ್ಡ ನಗರವಲ್ಲದಿದ್ದರೂ ಭೇಟಿ ಕೊಡುವಂಥ ಹಲವು ಸ್ಥಳಗಳು ಇಲ್ಲಿವೆ. ನಗರದ ಪ್ರತಿ ಭಾಗದಲ್ಲೂ ಏನಾದರೊಂದು ವಿಶೇಷತೆಯಿದೆ. ಮೈಸೂರು ಅರಮನೆ, ನಗರಕ್ಕೇ ಒಂದು ಕಿರೀಟದಂತೆ. ಜಗತ್ತಿನಲ್ಲಿ ಏನೆಲ್ಲಾ ಬದಲಾವಣೆಯಾಗಿದ್ದರೂ, ಸುಂದರವಾದ ಕಾಲವೊಂದು ಇಲ್ಲಿ ಕದಲದೇ ನಿಂತಂತೆ ಕಾಣುತ್ತದೆ. ತನ್ನ ಹಳೆಯ ಸೌಂದರ್ಯವನ್ನು ಮೈಸೂರು ಕಾಪಾಡಿಕೊಂಡಿದೆ’ ಎಂದು ಹೊಗಳಿಕೆಯ ಮಹಾಪೂರವನ್ನೇ ಹರಿಸಿದ್ದಾರೆ.





## ಜೆಕೆ ಈಗ ‘ವೀರ್’

‘ಐರಾವನ್’ ಸಿನಿಮಾ ನಂತರ ನಟ ಕಾರ್ತಿಕ್ ಜಯರಾಮ್ (ಜೆಕೆ) ಹೊಸ ಸಿನಿಮಾ ಘೋಷಣೆ ಮಾಡಿದ್ದಾರೆ. ಈ ಸಿನಿಮಾದಲ್ಲಿ ಅವರು ‘ವೀರ್’ ಆಗಿ ಕಾಣಿಸಿಕೊಳ್ಳುತ್ತಿದ್ದಾರೆ. ವಿಶೇಷ ಎಂದರೆ, ಇದರಲ್ಲಿ ಜೆಕೆ ಮೂಗನ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ.

ಈ ಹೊಸ ಸಿನಿಮಾ ಹೆಸರು ಕೂಡ ‘ವೀರ್’. ಕ್ರೈಮ್ ಥ್ರಿಲ್ಲರ್ ಕಥಾಹಂದರದ ಈ ಚಿತ್ರಕ್ಕೆ ಲೋಹಿತ್ ಆರ್. ನಾಯ್ಕ್ ನಿರ್ದೇಶನ ಮಾಡುತ್ತಿದ್ದಾರೆ. ಹರಿ ಸಂತು ಅವರ ಜೊತೆ ಕಾರ್ಯನಿರ್ವಹಿಸಿದ ಅನುಭವವಿರುವ ಲೋಹಿತ್ ಸಹಾಯಕ, ಸಹ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ‘ವೀರ್’ ಚಿತ್ರದ ಮೂಲಕ ಸ್ವತಂತ್ರ ನಿರ್ದೇಶಕರಾಗಿ ಚಂದನವನಕ್ಕೆ ಹೆಜ್ಜೆ ಇಟ್ಟಿದ್ದಾರೆ.

‘ವೀರ್’ ಸಿನಿಮಾದಲ್ಲಿ ಜೆಕೆಗೆ ಜೋಡಿಯಾಗಿ ಪ್ರಣತಿ ನಾಯಕಿಯಾಗಿ ನಟಿಸಿದ್ದು, ರೋಚಿತ್, ಮಂಜು ಪಾವಗಡ ತಾರಾಬಳಗದಲ್ಲಿದ್ದಾರೆ.

‘ಅಶ್ವಿನಿ ನಕ್ಷತ್ರ’ ಧಾರಾವಾಹಿ ಮೂಲಕ ಕನ್ನಡ ಕಿರುತೆರೆ ಪ್ರೇಕ್ಷಕರನ್ನು ಜೆಕೆ ರಂಜಿಸಿದ್ದರು. ಹಿಂದಿ ಕಿರುತೆರೆಯಲ್ಲಿಯೂ ಕಾಣಿಸಿಕೊಂಡಿದ್ದರು. ಆ ಬಳಿಕ ಬೆಳ್ಳಿತೆರೆಯತ್ತ ಮುಖ ಮಾಡಿದ್ದ ಅವರು, ಹಲವು ಸಿನಿಮಾಗಳಲ್ಲಿ ನಟಿಸಿದ್ದರು ಕೂಡ. ಇದೀಗ ಅವರ ಸಿನಿಮಾಗಳ ಸಾಲಿಗೆ ಹೊಸತೊಂದು ಚಿತ್ರ ಸೇರ್ಪಡೆಯಾಗಿದೆ. ಅವರ ಹುಟ್ಟುಹಬ್ಬದ ದಿನದಂದು ಮೋಷನ್ ಪೋಸ್ಟರ್ ಬಿಡುಗಡೆ ಮಾಡಲಾಗಿದೆ.

## ರಕ್ಷಿತ್ ರೆಡಿ!

‘ಸಪ್ತಸಾಗರದಾಚೆ ಎಲ್ಲೋ’ ಸಿನಿಮಾ ನಂತರ ನಟ ರಕ್ಷಿತ್ ಶೆಟ್ಟಿ, ತಮ್ಮ ‘ರಿಚರ್ಡ್ ಆಂಟನಿ’ ಸಿನಿಮಾದಲ್ಲಿ ಬ್ಯುಸಿಯಾಗಿದ್ದು, ಪ್ರಿ ಪ್ರೊಡಕ್ಷನ್ ಕೆಲಸಗಳಲ್ಲಿ ತಲ್ಲೀನರಾಗಿದ್ದಾರೆ. ಈಗಾಗಲೇ ಸಿನಿಮಾ ಚಿತ್ರೀಕರಣವೂ ಆರಂಭಗೊಂಡಿದೆ.



ತಾವು ನಿರ್ದೇಶಿಸಿ, ನಟಿಸುತ್ತಿರುವ ಈ ಸಿನಿಮಾ ಕೆಲಸ ಈಗಾಗಲೇ ಆರಂಭವಾಗಿದ್ದು, ಸ್ಕ್ರಿಪ್ಟ್ ಕೂಡ ಬಹುಪಾಲು ಸಿದ್ಧವಾಗಿದೆ ಎಂದು ಹೇಳಿಕೊಂಡಿದ್ದಾರೆ.

“‘ಉಳಿದವರು ಕಂಡಂತೆ’ ಸಿನಿಮಾ ಮಾಡುವಾಗ ದೀರ್ಘ ಸಮಯ ಉಡುಪಿಯಲ್ಲಿದ್ದೆ. ಅದು ನನ್ನ ನಿರ್ದೇಶನದ ಮೊದಲ ಸಿನಿಮಾ ಆಗಿತ್ತು. ಈಗ ನನ್ನ ನಿರ್ದೇಶನದ ಎರಡನೇ ಸಿನಿಮಾ ‘ರಿಚರ್ಡ್ ಆಂಟನಿ’ಗಾಗಿ ಮತ್ತೆ ಊರಿನಲ್ಲಿದ್ದೇನೆ. ಇಲ್ಲೇ ಚಿತ್ರೀಕರಣ ನಡೆಯುತ್ತಿದೆ” ಎಂದಿದ್ದಾರೆ ರಕ್ಷಿತ್.

90ರ ದಶಕದ ಕಥೆ ಇದಾಗಿದ್ದು, ಸಿನಿಮಾ ಕೆಲಸಗಳು ಭರದಿಂದ ಸಾಗಿವೆ.